# ದುಡ್ಡು ದೊಡ್ಡದಪ್ಪ..!

## ಪ್ರಶ್ನೋತ್ತರ

ಸಿ ಎಸ್ ಸುಧೀರ್, ಸಿಇಒ- ಸಂಸ್ಥಾಪಕರು
ಇಂಡಿಯನ್ ಮನಿ.ಕಾಂ



ಬ್ಯಾಂಕಿಂಗ್, ಹೂಡಿಕೆ, ಉಳಿತಾಯ, ಗಳಿಕೆ, ಸಾಲ, ವಿಮೆ ಹೀಗೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನೀವೂ ಕಳುಹಿಸಬಹುದು.

ಪ್ರಶ್ನೆ ಕಳುಹಿಸಬೇಕಾದ ಇ– ಮೇಲ್ ವಿಳಾಸ sudheer@indianMoney.com

# ಗ್ರೂಪ್ ಇನ್ಸೂರೆನ್ಸ್ ಇದ್ದಾಗ ಮತ್ತೊಂದು ವಿಮೆ ಅಗತ್ಯವೇ?

**1) ನನ್ನ ಹೆಸರು ಸದಾನಂದಮೂರ್ತಿ. ದಾವಣಗೆರೆ ನಿವಾಸಿಯಾಗಿರುವ ನನಗೆ ಈಗ 60 ವರ್ಷ. ಕಳೆದ ವರ್ಷ, ನನ್ನ ಪತ್ನಿ ನಮ್ಮಿಬ್ಬರು ಮಕ್ಕಳಿಗೂ ಸೇರಿದಂತೆ ಖ್ಯಾತ ಕಂಪನಿಯಿಂದ 6 ಲಕ್ಷ ಕವರೇಜ್ ಇರುವ ಫ್ಯಾಮಿಲಿ ಹೆಲ್ತ್ ಇನ್ಸೂರೆನ್ಸ್ ಮಾಡಿಸಿರುತ್ತಾರೆ. ಈಗ ನನ್ನ ಮಗಳು ಸಾಫ್ಟ್ ವೇರ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದು, ಅಲ್ಲಿ ನನ್ನ ಮಗನಿಗೆ ಹೊರತುಪಡಿಸಿ ಉಳಿದ ಎಲ್ಲರಿಗೂ ಇನ್ಸೂರೆನ್ಸ್ ಕವರೇಜ್ ಇದೆ. ಹೀಗಿರುವಾಗ ಈಗಾಗಲೇ ನಾವು ಹೊಂದಿರುವ ಹೆಲ್ತ್ ಇನ್ಸೂರೆನ್ಸ್ ರಿನಿವಲ್ ಮಾಡಬೇಕೆ? ಸೂಕ್ತ ಸಲಹೆ ನೀಡಿ.**

ಖಂಡಿತವಾಗಿಯೂ ನೀವು ಮತ್ತು ನಿಮ್ಮ ಕುಟುಂಬದವರು ಸೇರಿ ಹೊಂದಿರುವ 6 ಲಕ್ಷ ಕವರೇಜ್ ಇರುವ ಹೆಲ್ತ್ ಇನ್ಸೂರೆನ್ಸ್ ರಿನಿವಲ್ ಮಾಡಿಸಬೇಕು. ನನ್ನ ತಿಳುವಳಿಕೆಯ ಪ್ರಕಾರ ನಿಮ್ಮ ಮಗಳ ಕಂಪನಿಯಲ್ಲಿ ಗ್ರೂಪ್ ಹೆಲ್ತ್ ಇನ್ಸೂರೆನ್ಸ್ ಮಾಡಿಸಿರುತ್ತಾರೆ. ಅದರಿಂದ ನಿಮಗೆ ಅನುಕೂಲವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೂ ಸಹಿತ ನಿಮ್ಮ ಮಗಳ ಕಂಪನಿ ನೀಡಿರುವ ಗ್ರೂಪ್ ಹೆಲ್ತ್ ಇನ್ಸೂರೆನ್ಸ್ ಜತೆ ಪ್ರತ್ಯೇಕವಾಗಿ ಈಗಾಗಲೇ ನೀವು ಹೊಂದಿರುವ ಆರೋಗ್ಯ ವಿಮೆಯನ್ನು ರಿನಿವಲ್ ಮಾಡಿಸುವುದು ಅಗತ್ಯ. ಕಾರ್ಪೊರೇಟ್ ಕಂಪನಿಗಳಿಗೆ ನೀಡುವ ಹೆಲ್ತ್ ಇನ್ಸೂರೆನ್ಸ್ ಕವರೇಜ್ ವ್ಯಾಪ್ತಿಗೆ ಒಳಪಡದ ಅನೇಕ ವೆಚ್ಚಗಳನ್ನು ಭರಿಸಲು ನಿಮ್ಮ ಕುಟುಂಬ ಪಡೆದಿರುವ ವೈಯಕ್ತಿಕ ಹೆಲ್ತ್ ಇನ್ಸೂರೆನ್ಸ್ ಸಹಕಾರಿ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಒಂದೆರಡು ವರ್ಷಕ್ಕೆ ಉದ್ಯೋಗ ಬದಲಿಸೋದು ಸರ್ವೇ ಸಾಮಾನ್ಯ. ಗುಂಪು ವಿಮೆ ಒದಗಿಸಿರುವ ಕಂಪನಿ ತೊರೆದು ಬೇರೆ ಕಂಪನಿ ಸೇರುವ ಸಂದರ್ಭದಲ್ಲಿ ನಿಮ್ಮ ಮಗಳು ಮತ್ತು ನಿಮ್ಮ ಕುಟುಂಬದವರು ಆರೋಗ್ಯ ವಿಮೆಯ ರಕ್ಷಣೆಯಿಂದ ವಂಚಿತರಾಗಬಹುದು. ಆಗ ವೈಯಕ್ತಿಕವಾಗಿ ಮಾಡಿಸಿರುವ ಆರೋಗ್ಯ ವಿಮೆ ನಿಮ್ಮ ಮತ್ತು ನಿಮ್ಮ ಕುಟುಂಬದ ನೆರವಿಗೆ ಬರುತ್ತದೆ. ಇನ್ಸೂರೆನ್ಸ್ ಕಂತಿನ ಮೊತ್ತ ಕಡಿತಗೊಳಿಸಲು ಕಾರ್ಪೊರೇಟ್ ಗ್ರೂಪ್ ಹೆಲ್ತ್ ಇನ್ಸೂರೆನ್ಸ್ ಗಳಲ್ಲಿ ಇತ್ತೀಚೆಗೆ ಕೋ–ಪೇ (co-pay) ಎಂಬ ನಿಯಮ ರೂಢಿಯಲ್ಲಿದೆ. ಇದರಂತೆ, ಪೂರ್ವ ನಿರ್ಧಾರಿತ ಪ್ರಮಾಣಕ್ಕೆ ಅನುಗುಣವಾಗಿ ಚಿಕಿತ್ಸಾ ವೆಚ್ಚವನ್ನು ನೌಕರ (ಪಾಲಿಸಿದಾರ) ಹಾಗೂ ಕಂಪನಿಗಳು ಹಂಚಿಕೊಳ್ಳಬೇಕು. ಇಂತಹ ಸನ್ನಿವೇಶದಲ್ಲಿ ಇನ್ಸೂರೆನ್ಸ್ ಹೊಂದಿರುವ ನೌಕರ ಆಸ್ಪತ್ರೆ ಖರ್ಚಿನ ಶೇ.15ರಿಂದ30 ರಷ್ಟು ಮೊತ್ತವನ್ನು ತನ್ನ ಜೇಬಿನಿಂದ ಪಾವತಿಸಬೇಕಾಗುತ್ತದೆ. ಆಗ ವೈಯಕ್ತಿಕ ಆರೋಗ್ಯ ವಿಮೆ ನೆರವಿಗೆ ಬರುತ್ತದೆ. ಪ್ರತ್ಯೇಕ ವಿಮೆ ಅತ್ಯಗತ್ಯ ಎನ್ನವುದಕ್ಕೆ ಇನ್ನೊಂದು ಪ್ರಮುಖ ಕಾರಣ ಹೇಳ್ತೀನಿ. ವಯಸ್ಸಾದಂತೆ ಆರೋಗ್ಯ ವಿಮೆ ಕಂಪನಿಗಳು ಕೆಲವರಿಗೆ ಇನ್ಸೂರೆನ್ಸ್ ಕವರೇಜ್ ಕೊಡಲು ಮುಂದೆ ಬರುವುದಿಲ್ಲ. ಒಂದೊಮ್ಮೆ ಮುಂದೆ ಬಂದರೂ ಪ್ರೀಮಿಯಂ ಮೊತ್ತ ಜಾಸ್ತಿ ಇರುತ್ತದೆ. ನಿಯಮಿತವಾಗಿ ಒಂದು ಪ್ರತ್ಯೇಕ ಹೆಲ್ತ್ ಇನ್ಸೂರೆನ್ಸ್ ಪಾಲಿಸಿ ಹೊಂದಿದ್ದರೆ ಇಂತಹ ಸಮಸ್ಯೆ ಎದುರಾಗುವುದಿಲ್ಲ.

**2) ನಾನು ಬೆಳಗಾವಿಯ ನಿವಾಸಿ ಸುಮಾ. ನನ್ನ ಮಗನಿಗೆ ಈಗ 6 ವರ್ಷ. ಅವನ ಹೆಸರಿನಲ್ಲಿ ಬ್ಯಾಂಕ್ ಖಾತೆ ಆರಂಭಿಸಬಹುದೇ. ಮಕ್ಕಳಲ್ಲಿ ಉಳಿತಾಯದ ಮನೋಭಾವ ಬೆಳೆಸುವುದು ಹೇಗೆ?**

ಈಗ ಮೊದಲಿನ ಹಾಗೆ ಬ್ಯಾಂಕ್ ಖಾತೆ ಆರಂಭಿಸಲು 18 ವರ್ಷ ತುಂಬಿರಬೇಕು ಎಂಬ ನಿಯಮವಿಲ್ಲ. ನಿಮ್ಮ ಮಕ್ಕಳಿಗೆ 10 ವರ್ಷ ತುಂಬಿದ್ದರೆ ಸಾಕು, ಬಹುತೇಕ ಬ್ಯಾಂಕ್ ಗಳು ಸ್ವತಂತ್ರವಾಗಿ ಅಕೌಂಟ್ ಓಪನ್ ಮಾಡಲು ಅವಕಾಶ ನೀಡುತ್ತವೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 2014 ರಲ್ಲೇ ಈ ನಿಯಮವನ್ನು ಜಾರಿಗೆ ತಂದಿದೆ. ನಿಮ್ಮ ಮಕ್ಕಳು 10 ವರ್ಷ ಒಳಗಿನವರಾಗಿದ್ದರೆ ಜಂಟಿ ಬ್ಯಾಂಕ್ ಖಾತೆ ತೆರೆಯಲು ಅವಕಾಶವಿರುತ್ತದೆ. 10 ವರ್ಷದಿಂದ 18 ವರ್ಷ ವಯಸ್ಸಿನ ಮಕ್ಕಳು ಸ್ವತಂತ್ರವಾಗಿ ಬ್ಯಾಂಕ್ ಅಕೌಂಟ್ ಆರಂಭಿಸಲು ಬ್ಯಾಂಕ್ ಗಳು ಅನುಮತಿ ನೀಡುತ್ತವೆ. ಈ ಅಕೌಂಟ್ ಮಕ್ಕಳಿಗೆ 18 ತುಂಬುತ್ತಿದ್ದಂತೆಯೇ ಕ್ಲೋಸ್ ಆಗುತ್ತದೆ. ಆ ನಂತರದಲ್ಲಿ ಮಕ್ಕಳು ಈ ಅಕೌಂಟ್ ಅನ್ನು ಸೇವಿಂಗ್ಸ್ ಬ್ಯಾಂಕ್ ಅಕೌಂಟ್ ಆಗಿ ಪರಿವರ್ತಿಸಿ ಬಳಸಬೇಕಾಗುತ್ತದೆ.

**3) ನನ್ನ ಹೆಸರು ಮುರಳೀಧರ್ ಕುಲಕರ್ಣಿ. ನಾನು 1993ರಲ್ಲಿ 10 ಸಾವಿರ ರೂಪಾಯಿಗಳಿಗೆ ಒಂದು ನಿವೇಶನ ಖರೀದಿಸಿದ್ದೆ. ಎರಡು ತಿಂಗಳ ಹಿಂದೆ ಅದನ್ನು 8 ಲಕ್ಷಕ್ಕೆ ಮಾರಾಟ ಮಾಡಿದೆ. ಹಣ ಸೈಟ್ ಕೊಂಡವರ ಅಕೌಂಟನಿಂದ ನನ್ನ ಅಕೌಂಟಿಗೆ ಟ್ರಾನ್ಸ್ಫರ್ ಆಗಿದೆ. ಕ್ಯಾಪಿಟಲ್‌ಗೇನ್ ಟ್ಯಾಕ್ಸ್ ಉಳಿಸಿಕೊಳ್ಳಬೇಕಾದರೆ ಅದನ್ನು ಆರ್.ಈ.ಸಿ ಅಥವಾ ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾದ ಬಾಂಡ್ ಗಳಲ್ಲಿ ಮೂರು ವರ್ಷಗಳ ಕಾಲ ತೊಡಗಿಸಬೇಕಂತೆ. ಆದರೆ ಈ ಹಣವನ್ನು ಈ ಬಾಂಡ್ ಗಳಲ್ಲಿ ಹೇಗೆ ತೊಡಗಿಸಬೇಕೆಂಬುದು ನನಗೆ ತಿಳಿಯದಾಗಿದೆ. ದಯವಿಟ್ಟು ದುಡ್ಡು ದೊಡ್ಡದಪ್ಪ ಅಂಕಣದ ಮೂಲಕವೇ ನನಗೆ ಉತ್ತರಿಸಿ.**

ದುಡ್ಡು ದೊಡ್ಡದಪ್ಪ ಅಂಕಣವನ್ನು ತಾವು ಗಮನಿಸಿ ಪ್ರಶ್ನೆ ಕೇಳಿರುವುದು ನನಗೆ ಸಂತೋಷವಾಗಿದೆ. ದೀರ್ಘಾವಧಿಯಲ್ಲಿ ಹೊಂದಿದ್ದ ಆಸ್ತಿ ಮಾರಾಟದಿಂದ ಬರುವ ಹಣವನ್ನು 6 ತಿಂಗಳ ಕಾಲ ಮಿತಿಯ ಒಳಗೆ ಸರ್ಕಾರ ಗೊತ್ತುಪಡಿಸಿರುವ ಬಾಂಡ್ ಗಳಲ್ಲಿ ಹೂಡಿಕೆ ಮಾಡಿದರೆ ಆದಾಯ ತೆರಿಗೆ ಕಾಯ್ದೆ 1961 ರ ಸೆಕ್ಷನ್ 54 ಇಸಿ ರ ಪ್ರಕಾರ ತೆರಿಗೆಯಿಂದ ವಿನಾಯಿತಿ ಪಡೆದುಕೊಳ್ಳಬಹುದು. ಉದಾಹರಣೆಗೆ ಗ್ರಾಮೀಣ ವಿದ್ಯುತ್ ಪ್ರಸರಣ ನಿಗಮ (ಆರ್‌ಇಸಿ), ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್ ಎಚ್ ಎಐ)ದ ಬಾಂಡ್ ಗಳಲ್ಲಿ ಹೂಡಿಕೆ ಮಾಡಿದ ಬಳಿಕ ನಿಮಗೆ ಕ್ಯಾಪಿಟಲ್ ಗೇನ್ ಟ್ಯಾಕ್ಸ್ ಬರುವುದಿಲ್ಲ. ಆದರೆ ಬಾಂಡ್ ಗಳಲ್ಲಿ ಹೂಡಿಕೆ ಮಾಡಿದ ಬಳಿಕ ನಿಮಗೆ ಲಭ್ಯವಾಗುವ ಬಡ್ಡಿಗೆ ಆದಾಯ ತೆರಿಗೆ ಅನ್ವಯಿಸುತ್ತದೆ. ಬಾಂಡ್ ಗಳ ಲಾಕಿನ್ ಪೀರಿಯಡ್ 5 ವರ್ಷಗಳಾಗಿದ್ದು. ಅದಕ್ಕೂ ಮೊದಲು ಮಾರಾಟಕ್ಕೆ ಅವಕಾಶವಿರುವುದಿಲ್ಲ. ಈ ಒಂದು ಬಾಂಡ್ ನ ಮುಖ ಬೆಲೆ 10 ಸಾವಿರ ರೂಪಾಯಿ. ಒಬ್ಬ ವ್ಯಕ್ತಿ ಒಂದು ಆರ್ಥಿಕ ವರ್ಷದಲ್ಲಿ ಗರಿಷ್ಠ 500 ಬಾಂಡ್ ಗಳ ವರೆಗೆ ಖರೀದಿಸಬಹುದು. ಅಂದರೆ 50 ಲಕ್ಷ ರೂ. ಗಳ ವರೆಗೆ ಹೂಡಿಕೆ ಮಾಡಬಹುದು. ಏಪ್ರಿಲ್ 1, 2018 ರಿಂದ ಅನ್ವಯವಾಗುವಂತೆ ಈ ರೀತಿಯ ಬಾಂಡ್ ಗಳಲ್ಲಿ ಹೂಡಿಕೆ ಮಾಡುವವರಿಗೆ ವಾರ್ಷಿಕವಾಗಿ ಶೇ. 5.75 ಬಡ್ಡಿ ದರ ನಿಗದಿ ಮಾಡಲಾಗಿದೆ. ಕ್ಯಾಪಿಟಲ್ ಗೇನ್ ಬಾಂಡ್ ಗಳನ್ನು ಒಬ್ಬರ ಹೆಸರಿನಿಂದ ಇನ್ನೊಬ್ಬರ ಹೆಸರಿಗೆ ವರ್ಗಾಯಿಸಲು ಸಾಧ್ಯವಿಲ್ಲ, ಸಾಲ ಪಡೆಯಲು ಭದ್ರತೆಗಾಗಿ ಬಾಂಡ್ ಅನ್ನು ಇಡಲು ಬರುವುದಿಲ್ಲ. ಬಾಂಡ್ ಗಳನ್ನು ಖರೀದಿಸುವಾಗ ನೀವು ಸಹಿ ಮಾಡಿರುವ ಪ್ಯಾನ್ ಕಾರ್ಡ್, ಅಡ್ರೆಸ್ ಫ್ರೂಫ್ ಜೆರಾಕ್ಸ್ ಕಾಪಿ, ಮತ್ತು ಒಂದು ಕ್ಯಾನ್ಸಲ್ಡ್ ಚೆಕ್ ನೀಡಬೇಕು. ಈ ಬಾಂಡ್ ಗಳನ್ನು ನೇರವಾಗಿ ಗ್ರಾಮೀಣ ವಿದ್ಯುತ್ ಪ್ರಸರಣ ನಿಗಮ(ಆರ್‌ಇಸಿ) ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ( ಎನ್ ಎಚ್ ಎಐ) ಕ್ಕೆ ಅರ್ಜಿ ಸಲ್ಲಿಸಿ ಪಡೆದುಕೊಳ್ಳಬಹುದು. ಅಥವಾ ನೋಂದಾಯಿತ ಬ್ರೋಕರ್ ಗಳಿಂದಲೂ ಪಡೆಯಬಹುದು. ಆನ್ ಲೈನ್ ಮೂಲಕ ಈ ಬಾಂಡ್ ಗಳನ್ನು ಖರೀದಿಸಲು ಸದ್ಯ ವ್ಯವಸ್ಥೆ ಇಲ್ಲ. ಖುದ್ದಾಗಿ ಅರ್ಜಿ ಭರ್ತಿ ಮಾಡಿ ಹಣ ಪಾವತಿಸಿದಲ್ಲಿ ಮಾತ್ರ ಈ ಬಾಂಡ್ ಗಳು ಸಿಗುತ್ತವೆ.

IndianMoney.com ™

ಉಚಿತ ಆರ್ಥಿಕ ಸಲಹೆಗಾಗಿ ಮಿಸ್ ಕಾಲ್ ಕೊಡಿ
022 6181 6111